**ದಿನಾಂಕಃ 23.09.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 2 ನೇ ಆರೋಪಿ ಪರ Sri.BRD, ವಕೀಲರಿಂದಃ–**

21. 2 ನೇ ಆರೋಪಿ ಎಪಿಎಂಸಿಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದೇನೆ ಎಂದು ಹೇಳುತ್ತಿದ್ದ. ನನ್ನ ಬಳಿ ಮೃತ ರವಿ ಮಾತ್ರ ಕೆಲಸ ಮಾಡುತ್ತಿದ್ದ. ಎಪಿಎಂಸಿಯಲ್ಲಿ ಬೆಳಿಗ್ಗೆ 7.00 ಗಂಟೆಯಿಂದ ಸಂಜೆ 7.00 ಗಂಟೆಯವರೆಗೂ ಕೆಲಸ ಮಾಡುತ್ತಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. 2 ನೇ ಆರೋಪಿ ಬೆಳಿಗ್ಗೆ 7.00 ಗಂಟೆಗೆ ಎಪಿಎಂಸಿಗೆ ಹೋಗಿ ಸಂಜೆ 7.00 ಗಂಟೆಗೆ ವಾಪಸ್ಸು ಬರುತ್ತಿದ್ದ ಎನ್ನುವುದನ್ನು ನಾನು ನೋಡಿರುವುದಿಲ್ಲ. ಎಪಿಎಂಸಿ ಯಿಂದ ಕುರಿಮಂಡಿಗೆ 10 ಕಿ.ಮಿ. ದೂರವಾಗುತ್ತದೆ ಎನ್ನುವುದು ಸರಿ. 2 ನೇ ಆರೋಪಿ ನನ್ನ ಬಳಿಯಲ್ಲಿ ಕೆಲಸ ಮಾಡದೇ ಇದುದ್ದರಿಂದ, ಆತನಿಗೂ ಮತ್ತು ಮೃತ ರವಿಗೂ ಯಾವುದೇ ರೀತಿಯ ಸಂಬಂಧ ಇರಲಿಲ್ಲ ಎನ್ನುವುದು ಸರಿಯಲ್ಲ. 2 ನೇ ಆರೋಪಿ ಮತ್ತು ಮೃತ ರವಿ ಸಂಬಂಧಿಕರಲ್ಲ. ಅವರಿಬ್ಬರೂ ಅಕ್ಕಪಕ್ಕದ ಮನೆಯವರು ಅಲ್ಲ. ಮೃತ ರವಿ ವಾಸವಿದ್ದ ರೂಮಿನಿಂದ, 2 ನೇ ಆರೋಪಿಯ ಮನೆಗೆ ಅರ್ಧ ಕಿಮೀ ದೂರವಿತ್ತು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ, ಕೇವಲ 200 ಮೀ ದೂರವಿತ್ತು ಎಂದು. ನನ್ನ ಮನೆ, ಮೃತ ರವಿಯ ಮನೆ ಮತ್ತು 2 ನೇ ಆರೋಪಿಯ 200 ಮೀ. ಅಂತರದಲ್ಲಿ ಇರುತ್ತವೆ. ನಮ್ಮ ಮನೆಗಳು ಬೇರೆ ಬೇರೆ ಇದುದ್ದರಿಂದ, ಆ 2 ನೇ ಆರೋಪಿ ಮತ್ತು ಮೃತ ರವಿಯ ನಡುವೆ ಯಾವುದೇ ರೀತಿಯ ಫ್ರೆಂಡ್‌ಶಿಪ್ ಇರಲಿಲ್ಲ, ಈ ಬಗ್ಗೆ ನನಗೆ ಗೊತ್ತಿರಲಿಲ್ಲ ಎನ್ನುವುದು ಸರಿಯಲ್ಲ.

22. ಕುರಿಮಂಡಿ ಗೇಟ್ ಬಳಿಯಲ್ಲಿ ಮೃತ ರವಿ, 1 ಮತ್ತು 2 ನೇ ಆರೋಪಿ ನಡುವೆ ಗಲಾಟೆಯಾಗಿತ್ತು ಎಂದು ದಾಸ್ ಮೂಲಕ ನನಗೆ ತಿಳಿದು ಬಂತು. ಆ ಗಲಾಟೆಯಿಂದ ಸ್ಥಳದಿಂದ 150–200 ಮೀ. ದೂರವಿದೆ ಅಷ್ಟೇ. ದಾಸ್ ಹೇಳಿಕೆಯ ಆಧಾರದ ಮೇಲೆ ನೀವು ಪಿರ್ಯಾದನ್ನು ಕೊಟ್ಟಿರುತ್ತೀರಿ ಎಂದು ಕೇಳಿದ ಪ್ರಶ್ನೆಗೆ, ಸಾಕ್ಷಿ, 'ಅಲ್ಲ', ಬೆಳಿಗ್ಗೆ ಹೋಗಿ ಅಲ್ಲಿ ಕೊಲೆ ಆಗಿರುವುದನ್ನು ನೋಡಿ, ದಾಸ್ ಹಿಂದಿನ ದಿನ ಗಲಾಟೆಯಾದ ಬಗ್ಗೆ ತಿಳಿಸಿದ್ದನ್ನು ಕೇಳಿ ನಂತರ ದೂರನ್ನು ಕೊಟ್ಟಿರುತ್ತೇನೆ ಎನ್ನುತ್ತಾರೆ.

23. ಕುರಿಮಂಡಿ ಗೇಟ್ ಬಳಿಯಲ್ಲಿ ಗಲಾಟೆಯಾದ ಸಂದರ್ಭದಲ್ಲಿ 2 ನೇ ಆರೋಪಿ ಗಲಾಟೆಯನ್ನು ಬಿಡಿಸಲು ಬಂದಿದ್ದ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಆ ಗಲಾಟೆಯ ಸಂದರ್ಭದಲ್ಲಿ 2 ನೇ ಆರೋಪಿಗೆ ನಾಯಿ ಕಚ್ಚಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಈ ವಿಷಯವನ್ನು ನನಗೆ ದಾಸ್ ಹೇಳಿರುವುದಿಲ್ಲ. ಆಗ ಆ್ಯಂಬುಲೆನ್ಸ್ ಬಂದು 2 ನೇ ಆರೋಪಿಯನ್ನು ಚಿಕಿತ್ಸೆಗಾಗಿ ಕರೆದುಕೊಂಡು

ಹೋಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಗಲಾಟೆ ಬಿಡಿಸಲು 2 ನೇ ಆರೋಪಿ ಬಂದಿದ್ದು, ದಾಸ್ ತಪ್ಪು ಗ್ರಹಿಕೆಯಿಂದ ಗಲಾಟೆಯಲ್ಲಿ 2 ನೇ ಆರೋಪಿಯ ಇದ್ದಾನೆ ಎಂದು ಹೇಳಿರುತ್ತಾನೆ ಎನ್ನುವುದು ಸರಿಯಲ್ಲ.

24. ಮೃತ ರವಿ ಹಾಗೂ 2 ನೇ ಆರೋಪಿ ನಡುವೆ ಯಾವುದೇ ರೀತಿಯ ರಾಜಕೀಯ ವೈಷಮ್ಯ ಮತ್ತು ಹಣಕಾಸಿನ ವಿಚಾರವಾಗಿ ವೈಮನಸ್ಸು, ಯಾವುದು ಇರಲಿಲ್ಲ, ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.

25. ದೂರನ್ನು ಕೊಟ್ಟ 3 ದಿನಗಳ ನಂತರ ನಾನು ಠಾಣೆಗೆ ಹೋಗಿದ್ದೆ. 18 ನೇ ತಾರೀಖಿನಂದು ನಾನು ಕೊಟ್ಟಂತಹ ಫೋನ್ ನಂಬರ್ ತಪ್ಪಾಗಿದುದರಿಂದ, ಆ ಬಗ್ಗೆ ಸರಿಪಡಿಸಿ ಹೇಳಿಕೆಯನ್ನು ಕೊಡಲು ಹೋಗಿದ್ದೆ. ನಾನು 18 ನೇ ತಾರೀಖಿನಂದು ಪೊ.ಠಾಣೆಗೆ ಹೋಗಿರಲಿಲ್ಲ ಮತ್ತು ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ ಎನ್ನುವುದು ಸರಿಯಲ್ಲ. ದಿಃ09.03.2021 ರಂದು ನಾನು ಪೋಲೀಸರ ಮುಂದೆ ಮರು ಹೇಳಿಕೆಯನ್ನು ಕೊಟ್ಟಿರುತ್ತೇನೆ ಎನ್ನುವುದು ಸರಿಯಲ್ಲ. ನಾನು ಠಾಣೆಯಲ್ಲಿ 2 ನೇ ಆರೋಪಿಯನ್ನು ಮಾತನಾಡಿಸಿದಾಗ ನನ್ನ ಜೊತೆ ಪೊಲೀಸರು ಇರಲಿಲ್ಲ. 2 ನೇ ಆರೋಪಿ ನನ್ನ ಮುಂದೆ ಕೊಲೆ ಮಾಡಿದ ವಿಚಾರವನ್ನು ಒಪ್ಪಿಕೊಂಡ ಬಗ್ಗೆ ಅದನ್ನು ನಾನು ಪೊಲೀಸರ ಮುಂದೆ ಹೇಳಿರುವುದಿಲ್ಲ. 2 ನೇ ಆರೋಪಿ ನನ್ನ ಮುಂದೆ ಕೊಲೆ ಮಾಡಿದ ವಿಚಾರವನ್ನು ಒಪ್ಪಿಕೊಂಡಿರುವುದಿಲ್ಲ ಎನ್ನುವುದು ಸರಿಯಲ್ಲ.

26. ಮೃತ ರವಿ ಸಾಯುವ ಮೊದಲು, 2 ನೇ ಆರೋಪಿ ನನ್ನ ಬಳಿ ಕೆಲಸ ಮಾಡುತ್ತಿದ್ದ ಎನ್ನುವುದು ಸರಿಯಲ್ಲ. ಆಗ ಆತ ಮತ್ತು ನನ್ನ ನಡುವೆ ಕೂಲಿ ವಿಷಯವಾಗಿ ಗಲಾಟೆಯಾಗಿತ್ತು ಎನ್ನುವುದು ಸರಿಯಲ್ಲ. ಈ ಬಗ್ಗೆ ಆತ ದೂರನ್ನು ಕೊಟ್ಟಾಗ ನಾನೇ ರಾಜೀ ಮಾಡಿಕೊಂಡು, ಆತನಿಗೆ ಕೂಲಿ ಕೊಟ್ಟಿದ್ದೆ ಎನ್ನುವುದು ಸರಿಯಲ್ಲ. ಆ ಗಲಾಟೆಯಾದ ನಂತರವೇ ಆತ ನನ್ನ ಬಳಿಯಲ್ಲಿ ಕೆಲಸ ಬಿಟ್ಟು ಎಪಿಎಂಸಿಗೆ ಕೆಲಸಕ್ಕೆ ಹೋಗುತ್ತಿದ್ದ ಎನ್ನುವುದು ಸರಿಯಲ್ಲ. ನನ್ನ ಬಳಿಯಲ್ಲಿ ಕೆಲಸ ಮಾಡುವ ಮುಕ್ಕಾಲು ಜನ ಕೆಲಸಗಾರರು ಕುರಿಮಂಡಿಯವರೇ ಎನ್ನುವುದು ಸರಿ. ದಾಸ್ ಕೂಡ ನನ್ನ ಬಳಿ ಕೆಲಸ ಮಾಡುತ್ತಿದ್ದ ಎನ್ನುವುದು ಸರಿ. ನಿಮ್ಮ ಮತ್ತು 2 ನೇ ಆರೋಪಿಯ ನಡುವೆ ಆಗಿದ್ದ ಗಲಾಟೆಯ ವಿಷಯ ದಾಸ್ ಗೆ ಕೂಡ ಗೊತ್ತಿತ್ತು ಎಂದು ಮಾಡಿದ ಸಲಹೆಗೆ, ಸಾಕ್ಷಿ, ನಮ್ಮ ನಡುವೆ ಗಲಾಟೆಯಾಗಿರಲೇ ಇಲ್ಲ ಎನ್ನುತ್ತಾರೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಹೀಗಾಗಿ ದಾಸ್ 2 ನೇ ಆರೋಪಿಯ

ಬಗ್ಗೆ ನನ್ನ ಬಳಿ ಸುಳ್ಳು ವಿಷಯವನ್ನು ತಿಳಿಸಿರುತ್ತಾನೆ ಎನ್ನುವುದು ಸರಿಯಲ್ಲ. 2 ನೇ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನೇ ಖುದ್ದು 2 ನೇ ಆರೋಪಿಯ ಹೆಸರನ್ನು ದೂರಿನಲ್ಲಿ ಸೇರಿಸಿರುತ್ತೇನೆ ಎನ್ನುವುದು ಸರಿಯಲ್ಲ.

27. ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ನಿಪಿ–2 ರಿಂದ 17 ಫೋಟೋಗಳಲ್ಲಿ 2 ನೇ ಆರೋಪಿ ಕಂಡು ಬರುವುದಿಲ್ಲ ಎನ್ನುವುದು ಸರಿ. ಈ ಪ್ರಕರಣಕ್ಕೂ 2 ನೇ ಆರೋಪಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ 1 ಮತ್ತು 3 ನೇ ಆರೋಪಿಗಳ ಪರ ವಕೀಲರಿಂದಃ–**

28. ನಾನು ಕೊಟ್ಟಂತಹ ಪಿರ್ಯಾದನ್ನು 3 ದಿನಗಳ ನಂತರ ಓದಿ ನೋಡಿದಾಗ, ಅದರಲ್ಲಿ ದಾಸನ ಮೊಬೈಲ್ ನಂಬರನ್ನು ತಪ್ಪಾಗಿ ಕೊಟ್ಟಿರುವುದು ಕಂಡು ಬಂತು. ಹೀಗಾಗಿ ನಾನು ಪುನಃ ಪೊ.ಠಾಣೆಗೆ ಹೋಗಿ, ಸರಿಯಾದ ನಂಬರನ್ನು ತಿಳಿಸಿ ಬಂದೆ. ಪೊ.ಠಾಣೆಗೆ ಹೋಗುವಾಗ ದಾಸ್ ನನ್ನೊಂದಿಗೆ ಬಂದಿರಲಿಲ್ಲ. ನಾನು ದೂರನ್ನು ಕೊಡಲು ಹೋದಾಗ ನಮ್ಮ ಏರಿಯಾದವರೆಲ್ಲರೂ ಸುಮಾರು 15 ಜನ ಬಂದಿದ್ದರು. ಅವರ ಹೆಸರುಗಳನ್ನು ನಾನೀಗ ಹೇಳಲು ಆಗುವುದಿಲ್ಲ.

29. ಕೃತ್ಯ ನಡೆದ ಸ್ಥಳದಲ್ಲಿ 6 ಪ್ಲಾಸ್ಟಿಕ್ ಲೋಟಗಳು ಇದ್ದವು. ಒಂದರಲ್ಲಿ ಸ್ವಲ್ಪ ಮದ್ಯ ಇತ್ತು. ಆ ಆರು ಲೋಟಗಳು ಬೇರೆ ಬೇರೆಯಾಗಿದ್ದವೋ, ಒಂದರ ಒಳಗೆ ಒಂದಿದ್ದವೋ, ನಾನು ನೋಡಲಿಲ್ಲ. ಅವುಗಳನ್ನು ಅಮಾನತು ಪಡಿಸಿಕೊಂಡು ಬಿಳಿ ಬಣ್ಣದ ಬಟ್ಟೆಯ ಕವರಿನೊಳಗೆ ಹಾಕಿದ ನಂತರ ನನ್ನ ಸಹಿಯನ್ನೇನೂ ಪಡೆದಿರುವುದಿಲ್ಲ. ಅಮಾನತು ಪಡಿಸಿಕೊಂಡ ಚಾಪೆಯ ಮೇಲೂ ನನ್ನ ಸಹಿ ಪಡೆದಿರುವುದಿಲ್ಲ. ಮೃತ ರವಿ ಯಾವ ರೀತಿಯ ಬಟ್ಟೆ ಹಾಕಿದ್ದ ಎನ್ನುವುದನ್ನು ನಾನು ನೋಡಲಿಲ್ಲ. ನಿಪಿ–2 ಮತ್ತು 3 ನ್ನು ಫೋಟೋಗ್ರಾಫರ್ ತೆಗೆದಿರುತ್ತಾರೆ. ನಿಪಿ–2 ಮತ್ತು 3 ನ್ನು ಹೊರತುಪಡಿಸಿ ಬೇರೆ ಫೋಟೋಗಳಲ್ಲಿ ನಾನು ಇರುವುದಿಲ್ಲ ಎನ್ನುವುದು ಸರಿ. ನಿಪಿ–2 ರಿಂದ 13 ಫೋಟೋಗಳನ್ನು ಫೋಟೋಗ್ರಾಫರ್ ತೆಗೆದಿರುತ್ತಾರೆ. ಉಳಿದ ಫೋಟೋಗಳ ಬಗ್ಗೆ ನನಗೆ ಗೊತ್ತಿಲ್ಲ. ಫೋಟೋಗಳನ್ನು ತೆಗೆದ ನಂತರ ನಾನು ಠಾಣೆಗೆ ಹೋಗಿರುವುದಿಲ್ಲ. ಪೋಸ್ಟ್ ಮಾಟಮ್ ನನ್ನನ್ನು ಪೊಲೀಸರು ಕರೆದಿದ್ದರು. ಆಗ ನಮ್ಮ ಇಡೀ ಏರಿಯಾದ ಜನರು ಬಂದಿದ್ದರು. ಮೃತ ರವಿಯ ಮನೆಯ ಕಡೆಯವರು ಆ ದಿನ ಏಕೆ ಬರಲಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಅಲ್ಲಿ ಅಮಾನತು ಪಡಿಸಿಕೊಂಡ ಕಿಂಗ್ ಫಿಶರ್ ಬಿಯರ್ ಬಾಟಲಿಯ ಮೇಲೆ ಅಂದರೆ ಮು.ಮಾ.1 ರ ಮೇಲೆ ನನ್ನ ಸಹಿ ಪಡೆರುವುದಿಲ್ಲ. ಆ

ರೂಮಿನಲ್ಲಿ ಅಮಾನತು ಪಡಿಸಿಕೊಂಡ ಯಾವುದೇ ವಸ್ತುಗಳ ಮೇಲೂ ಪೊಲೀಸರು ನನ್ನ ಸಹಿ ಪಡೆದಿರುವುದಿಲ್ಲ. ಅಲ್ಲಿದ್ದ ರವಿಯ ಒಂದು ಟಿ–ಶರ್ಟನ್ನು ಪೊಲೀಸರು ತೆಗೆದುಕೊಂಡರು. ಆ ಸ್ಟೀಲ್ ಲೋಟದಲ್ಲಿ ಬೀಡಿ ತುಂಡುಗಳು ಮತ್ತು ಸಿಗರೇಟ್ ತುಂಡುಗಳು ಇದ್ದವು, ಅವುಗಳನ್ನು ನನಗೆ ತೋರಿಸಿದರು. ಇಡೀ ಏರಿಯಾದವರು ಸೇರಿ ಮೈಸೂರಿನ ಶವಾಗಾರದಲ್ಲಿ ಆತನ ಅಂತ್ಯಕ್ರಿಯೆ ಮಾಡಿದೆವು. 18 ನೇ ತಾರೀಖಿನಂದು ನಾನು ಪೊ.ಠಾಣೆಗೆ ಹೋದಾಗ ಅಲ್ಲಿ ಆರೋಪಿಗಳು ಕಾಣಿಸಲಿಲ್ಲ. ಆರೋಪಿತರು ಠಾಣೆಯಲ್ಲಿದ್ದಾಗ ಪೊಲೀಸರು ನನ್ನನ್ನು ಕರೆಸಿರಲಿಲ್ಲ. 18 ನೇ ತಾರೀಖಿನ ನಂತರ ಒಂದೂವರೆ, ಎರಡು ತಿಂಗಳ ನಂತರ ಪೊಲೀಸರು ಕರೆಸಿದ್ದರು, ಹಾಗಾಗಿ ಹೋಗಿದ್ದೆ.

30. ಮೃತ ರವಿಗೆ ಆರೋಪಿತರು ಸ್ನೇಹಿತರು ಎನ್ನುವ ವಿಷಯ ನನಗೆ ಖುದ್ದು ಗೊತ್ತಿತ್ತು. ಆರೋಪಿತರು ಮೂವರು ಸ್ನೇಹಿತರು. ಅವರು ಜೊತೆಯಲ್ಲಿ ಇರುತ್ತಿದುದ್ದನ್ನು ನಾನು ನೋಡುತ್ತಿದ್ದೆ. ಮೂವರು ಆರೋಪಿತರು ನನ್ನ ಬಳಿ ಕೆಲಸಕ್ಕೆ ಬರುತ್ತಿರಲಿಲ್ಲ. ಈ ಮೂವರು ಆರೋಪಿತರು ಸ್ನೇಹಿತರೇ ಅಲ್ಲ ಎನ್ನುವುದು ಸರಿಯಲ್ಲ. ಈ ಮೂವರಿಗೂ ಪರಿಚಯವೇ ಇರಲಿಲ್ಲ ಎನ್ನುವುದು ಸರಿಯಲ್ಲ. ಹಿಂದಿನ ರಾತ್ರಿ ಈ ಆರೋಪಿತರು ಒಟ್ಟಿಗೆ ಇರಲೇ ಇಲ್ಲ ಎನ್ನುವುದು ಸರಿಯಲ್ಲ. ಆ ರಾತ್ರಿ ಮೃತ ರವಿಯ ಮನೆಯಲ್ಲಿ, ಈ ಮೂವರು ಆರೋಪಿತರು ಇರಲಿಲ್ಲ, ಬೇರೆ 6 ಜನ ಯಾರೋ ಇದ್ದರು ಎನ್ನುವುದು ಸರಿಯಲ್ಲ. ಈ ಮೂವರು ಆರೋಪಿತರು ಆ ರಾತ್ರಿ ಮೃತ ರವಿಯ ಮನೆಗೆ ಹೋಗಿರದಿದ್ದರು, ಇರದಿದ್ದರೂ, ನಾನು ದಾಸ್ ಮಾತನ್ನು ಕೇಳಿಕೊಂಡು ಸುಳ್ಳು ದೂರನ್ನು ಕೊಟ್ಟು, ಸುಳ್ಳು ಪ್ರಕರಣದಲ್ಲಿ ಈ ಆರೋಪಿತರನ್ನು ಸಿಲುಕಿಸಿರುತ್ತೇನೆ ಎನ್ನುವುದು ಸರಿಯಲ್ಲ.

31. ನಿಪಿ–14 ರಿಂದ 17 ರವರೆಗಿನ ಫೋಟೋಗಳನ್ನು ನಾನು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ನೋಡಿರುತ್ತೇನೆ.

**ಮೇಲ್ಕಂಡ ಪಾಟೀಸವಾಲನ್ನು 2 ನೇ ಆರೋಪಿ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.